6)	ಸ.ಆ.ಕೇಂದ್ರ,ಬ್ಯಾಡಗಿ,	ಬ್ಯಾಡಗಿ ತಾ:	-2
7)	ಪ್ರಾ.ಆ.ಕೇಂದ್ರ, ಕಾಗಿನೆಲೆ	-''-	-1
8)	ಸಾ.ಆಸ್ಪತ್ರೆ, ಸವಣೂರು	ಸವಣೂರು ತಾ:	-2
9)	ಪ್ರಾ.ಆ.ಕೇಂದ್ರ, ಕಾರದಗಿ	-''-	-2
10)	ಪ್ರಾ.ಆ.ಕೇಂದ್ರ, ಹತ್ತಿಮತ್ತೂರ್	-''-	-1
11)	ಸಾ.ಆಸ್ಪತ್ರೆ, ಹಾನಗಲ್,	ಹಾನಗಲ್ ತಾ:	-1
12)	ಎನ್.ಎಲ್.ಸಿ.ಸಿ.ಹಾನಗಲ್	-''-	-1
13)	ಪ್ರಾ.ಆ.ಕೇಂದ್ರ, ಶ್ಯಾಡಗುಪ್ಪಿ	-''-	-1
14)	ಸ.ಆ.ಕೇಂದ್ರ ಆಲೂರು	-''-	-2
15)	ಸ.ಆ.ಕೇಂದ್ರ ಹಿರೇಕೆರೂರು	ಹಿರೇಕೆರೂರು ತಾ:	5
16)	ಪ್ರಾ.ಆ.ಕೇಂದ್ರ, ರಚ್ಚಿಹಳ್ಳಿ	-''-	-1
17)	ಪ್ರಾ.ಆ.ಕೇಂದ್ರ, ಕೋಡ	-''-	-2
18)	ಪ್ರಾ.ಆ.ಕೇಂದ್ರ, ಕುಡುಪಲಿ	-''-	-1
19)	ಸ.ಆ.ಕೇಂದ್ರ, ಶಿಗ್ಗಾಂವ್	ಶಿಗ್ಗಾಂವ್ ತಾ:	-5
		ಒಟ್ಟು	**35**

ಹಿರೇಕೆರೂರು ತಾಲ್ಲೂಕು ಜಾವಳ್ಳಿ ಗ್ರಾಮಕ್ಕೆ ನೀರಿನ ವ್ಯವಸ್ಥೆ

51 (110)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾವೇರಿ ಜಿಲ್ಲಾ ಹಿರೇಕೆರೂರು ತಾಲ್ಲೂಕು ಜೌವಳ್ಳಿ ಗ್ರಾಮದ ಕಿರುನೀರು ಪೂರೈಕೆಯ ಯೋಜನೆಯ ಟ್ಯಾಂಕುಗಳಿಗೆ ನೀರು ಹೋಗದೆ ಜನರಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಟ್ಯಾಂಕುಗಳಿಗೆ ನೀರು ಹೋಗುವಂತೆ ಎಷ್ಟು ದಿನಗಳಲ್ಲಿ ಮಾಡಲಾಗುವುದು?

ಇ) ಇಡೀ ನೀರಿಗೆ ಒಂದೇ ಕೈಪಂಪು ಇದ್ದು ಅದು ಕೆಟ್ಟಾಗ 2-3 ಕಿಲೋಮೀಟರ್ ದೂರದಿಂದ ನೀರು ತರಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಇನ್ನೊಂದು ಕೈಪಂಪು ಕೊರೆಯಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):

ಅ) ಬಂದಿದೆ.

ಆ) ಒಂದು ವಾರದೊಳಗಾಗಿ ಸೂಕ್ತ ವ್ಯವಸ್ಥೆಯನ್ನು ಮಾಡಲಾಗುವುದು.

ಇ) ಗ್ರಾಮಕ್ಕೆ ಕಿರುನೀರು ಸರಬರಾಜು ವ್ಯವಸ್ಥೆಯಿದ್ದು ವಿದ್ಯುತ್ ಪೂರೈಕೆಯಲ್ಲಿ ಅಡಚಣೆ ಉಂಟಾದಾಗ ಒಂದೇ ಕೈಪಂಪು ಕಾರ್ಯನಿರ್ವಹಿಸುತ್ತಿರುವುದರಿಂದ ಕುಡಿಯುವ ನೀರಿಗೆ ತೊಂದರೆಯಾಗುತ್ತದೆ.

ಈ) ಇದನ್ನು ಪರಿಶೀಲಿಸಲಾಗುವುದು.

ಉದ್ಯೋಗ ಭರವಸೆ ಯೋಜನೆ

52 (114)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 31-1-1998 ಜಿಲ್ಲಾವಾರು ಉದ್ಯೋಗ ಭರವಸೆ ಯೋಜನೆಯಡಿಯಲ್ಲಿ ಬಿಡುಗಡೆ ಆದ ಹಣ ಎಷ್ಟು? ಹಾಗೂ ಖರ್ಚಾದ ಹಣ ಎಷ್ಟು?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಪ್ರಸಕ್ತ ಸಾಲಿನಲ್ಲಿ 31-1-1998ರವರೆಗೆ ಉದ್ಯೋಗ ಭರವಸೆ ಯೋಜನೆಯಡಿ ಜಿಲ್ಲಾವಾರು ಬಿಡುಗಡೆಯಾಗಿರುವ ಮೊತ್ತ ಹಾಗೂ ಖರ್ಚಾಗಿರುವ ಮೊತ್ತದ ವಿವರಗಳು ಈ ಕೆಳಕಂಡಂತಿರುತ್ತದೆ.